O.S. NO. 255/2022
PW -1 .
Dated 19-09-2024.

ಸಾಕ್ಷಿಯನ್ನು ಈ ದಿನ ದಿನಾಂಕ 19-09-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಸಿ ಎಸ ಸಿ ವಕೀಲರಿಂದಃ

ನಾನು ಡಿಗ್ರಿ ವರೆಗೆ ಶಿಕ್ಷಣ ಮುಗಿಸಿರುತ್ತೇನೆ. ಪ್ರಸ್ತುತ ದಾವೆಯನ್ನು ದಾವಾ ಆಸ್ತಿಗಳಲ್ಲಿ ನನ್ನ ತಂದೆಯ ಹಿಸ್ಸೆಗೆ ಸರಿಯಾಗಿ ಪಾಲು ಬಂದಿರುವುದಿಲ್ಲ ಹೀಗಾಗಿ ಸರಿಯಾದ ಹಿಸ್ಸೆ ಕೊರಿ ದಾವೆ ಸಲ್ಲಿಸಿರುತ್ತೇವೆ. ದಾವಾ ಆಸ್ತಿಗಳ ಚಕ್ಕಬಂದಿ ನನಗೆ ಸರಿಯಾಗಿ ಗೊತ್ತಿರುವುದಿಲ್ಲ ಆದರೆ ಅವುಗಳ ಸರ್ವೆ ನಂಬರ ಹೇಳಬಲ್ಲೆ. ನನ್ನ ತಂದೆ ಮತ್ತು ಆತನ ಸಹೊದರರ ಮಧ್ಯೆ ಈಗಾಗಲೇ ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಟ್ನಿಯಲ್ಲಿ ಉಡಕೇರಿ ಗ್ರಾಮ ಸರ್ವೆ ನಂ. 119/2ಬ ಕ್ಷೇತ್ರ 4 ಎಕರೆ ಆಸ್ತಿ ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. 119/2ಬ ಆಸ್ತಿಯನ್ನು ನನ್ನ ತಂದೆ 2006 ರಲ್ಲಿ ಮಲ್ಲಿಕಾರ್ಜುನ ಮೂಗಪ್ಪ ಗೂಳಪ್ಪನವರ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ದೊಡ್ಡಪ್ಪ ಇಬ್ಬರು ಸೇರಿ ಮಾರಾಟ ಮಾಡಿದ್ದಾರೆ ಆಗ ಅದು ಅವರ ಒಟ್ಟು ಕುಟುಂಬದ ಆಸ್ತಿ ಇತ್ತು ಎಂದು ನುಡಿದಿರುತ್ತಾರೆ. ಸದರಿ ಸರ್ವೆ ನಂ. 119/2ಬ ಈ ದಾವೆಯಲ್ಲಿ ಸೇರಿಸಿಲ್ಲ ಕಾರಣ ಅದನ್ನು ಆಗಲೆ ಮಾರಾಟ ಮಾಡಿರುವುದರಿಂದ ಸೇರಿಸಿಲ್ಲ. ಸದರಿ ಖರೀದಿದಾರರನ್ನು ಅವಶ್ಯಕ ಪಕ್ಷಗಾರರನ್ನಾಗಿ

ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ದೊಡಡ್ಡಪ್ಪ ಸೇರಿ ಮಾರಾಟ ಮಾಡಿರುವುದರಿಂದ ಅವರನ್ನು ಸೇರಿಸಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ. 155/3ಬ ಮತ್ತು 153/2 ಗಳಿಗೆ ಸಂಬಂದಿಸಿದಂತೆ ಬೈಲಹೊಂಗಲ ಹೆಚ್ಚುವರಿ ಸಿವಿಲ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ನಿಜ. ಪ್ರಸ್ತುತ ದಾವೆಯಲ್ಲಿ ಈಶ್ವರ ಬಸಪ್ಪ ದದ್ದುರ ರವರಿಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವರದೇ ಬೇರೆ ಆಸ್ತಿಗಳು ನಮ್ಮದೇ ಬೇರೆ ಆಸ್ತಿಗಳು ಇರುತ್ತದೆ ಎಂದು ನುಡಿದಿರುತ್ತಾರೆ. ಹಿಸ್ಸಾ ಪೊಡಿ ಆದ ನಂತರ ಸರ್ವೆ ನಂ. 153/6 ಮತ್ತು 153/7 ಅಂತಾ ಆಯಿತು ಎಂದರೆ ನಿಜ. ಸರ್ವೆ ನಂ. 153/6 ರಲ್ಲಿ ನಮ್ಮ ಮತ್ತು ಪ್ರತಿವಾಗಳ ಸಾಮೂಹಿಕ ಉತಾರದಲ್ಲಿ ಹೆಸರು ಇರುತ್ತವೆ ಎಂದರೆ ನಿಜ. ಈಗಾಗಲೇ ನಮ್ಮ ಮತ್ತು ಪ್ರತಿವಾದಿಗಳ ಮದ್ಯೆ ವಾಟ್ನಿ ಆಗಿದ್ದು ಅಸಲು ದಾವೆ ಸಂಖ್ಯೆ 128/2020 ರಲ್ಲಿ ಇದ್ದ ಆಸ್ತಿಗಳಿಗೆ ಸಂಬಂದಿಸಿದಂತೆ ಮಾತ್ರ ವಾಟ್ನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾಟ್ನಿಯಲ್ಲಿ ನನ್ನ ತಂದೆ ಹಿಸ್ಸೆಗೆ ಮನೆ ಗ್ರಾಮ ಪಂಚಾಯತಿ ಆಸ್ತಿ ನಂ 440 ಬಂದಿತ್ತು ಎಂದರೆ ಸದರಿ ಮನೆ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ನುಡಿದಿರುತ್ತಾರೆ. ಸದರಿ ಮನೆಯ ಆಸ್ತಿ ಮೂಲತಃ ರಾಮಚಂದ್ರ ಅಣ್ಣಪ್ಪ ಬೊಳಶೆಟ್ಟಿರವರ ಆಸ್ತಿ ಇತ್ತು ಎಂದರೆ ನಿಜ. ಸದರಿ ಮನೆ ಆಸ್ತಿಯನ್ನು ಪ್ರತಿವಾದಿಯರ ತಂದೆ ರುದ್ರಗೌಡ ಈತನು 05-06-1970 ರಲ್ಲಿ ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

O.S. NO. 255/2022

PW -1 .

Dated 19-09-2024.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.